ಹೆಂಡತಿಯ ಫೋಟೊದ ಮುಂದೆ ಮೌನವಾಗಿ ರೋದಿಸಿದರು. ಅನಿತಾಳನ್ನು ಕರೆದ ನಾಗೇಂದ್ರ "ಇಂಥಾ ಪರಿಸ್ಥಿತಿವಳಗ ನಿಮ್ಮಪ್ಪ ಒಬ್ಬರ ಯಾಕ ಬ್ಯಾರೇ ಮನ್ಯಾಗ ಡಬ್ಬಿ ತರಿಸಿಗೊಂಡಿರಬೇಕು. ನಮ್ಮನ್ಯಾಗ ಇರ್ಲಿ. ನಮ್ಮೊಳಗ ಅವರೊಬ್ಬರು" ಎಂದಾಗ, "ಸುಮ್ಮನ ಕೂಡ್ರಿ. ಅಪ್ಪನ್ನ ನೋಡಕೋಳಿಕ್ಕಂತ ನಮಗ ಒಂದ ಪೈಸಾ ಕೊಡಂಗಿಲ್ಲ. ಮನಿ ಮಾರಬೇಕಂತ. ಅದರಾಗ ಸಮಾ ಪಾಲ ಬೇಕಂತ ನಮ್ಮ ಅಕ್ಕಗ. ಬುದ್ಧಿ ಬರ್ಲಿ" ಎಂದು ದಬಾಯಿಸಿದಳು ಅನಿತಾ. ಮಧ್ಯೆ ಶ್ರೀಪಾದ ಸೋತು ಸುಣ್ಣವಾದರು. ಮಕ್ಕಳ ಕೈಯಲ್ಲಿ ಸಂಪೂರ್ಣವಾಗಿ ಸಿಕ್ಕು ಬಿದ್ದೆನೆಂದು ಅರಿವಾಗಿ ಎಲ್ಲಕ್ಕೂ ತಲೆಯಾಡಿಸಿಬಿಟ್ಟರು. ಕೊನೆಯ ಬಾರಿ ದತ್ತಪ್ಪನ ಅಭಿಷೇಕವನ್ನು ಕಂಬನಿಗಳೊಂದಿಗೇ ಮಾಡಿದರು. "ನಿನ್ನ ವ್ಯವಸ್ಥಾ ಮಾಡಾಂವ ನಾ ಯಾರಪಾ. ನೀನ ಮಾಡಕೋಬೇಕು. ಎಲ್ಲಾ ನಿನ್ನ ಇಚ್ಛಾ" ಎಂದು ಅತ್ತುಬಿಟ್ಟರು.

ಮೊದಲೇ ಯೋಚಿಸಿದಂತೆ ಎಲ್ಲರೂ ಗೋಕರ್ಣ ಸೇರಿದ್ದಾಯಿತು. ಮಹಾಬಲೇಶ್ವರನ ದರ್ಶನದ ನಂತರ ದತ್ತಪ್ಪನ ಬೆತ್ತದ ಪೆಟ್ಟಿಗೆಯೊಂದಿಗೆ ಸಮುದ್ರ ತೀರ ಸೇರಿದ್ದಾಯಿತು. ಅಂದು ಅವರು ದತ್ತಪ್ಪನಿಗೆ ಜಲದೊಂದಿಗೆ ಕಣ್ಣೀರಿನಲ್ಲೂ ಅಭಿಷೇಕ ಮಾಡಿದ್ದರು. "ನನ್ನ ಕ್ಷಮಾ ಮಾಡಪಾ" ಎಂದು ಅವರ ಅಂತರಾತ್ಮ ಬಾರಿ ಬಾರಿಗೂ ಚೀರುತ್ತಿತು. ಮಕ್ಕಳು, "ಹ್ಞೂಂ, ಹೋಗ್ರಿ" ಎಂದಾಕ್ಷಣ ಕೀಲಿ ಕೊಟ್ಟ ಗೊಂಬೆಯಂತೆ ಶ್ರೀಪಾದ ತೆರೆಗಳತ್ತ ಮುನ್ನಡೆದರು. ಮಗುವಾಗಿದ್ದಾಗಿನಿಂದ ನಡೆದ ದತ್ತಪ್ಪನ ಪೂಜೆ, ಭಜನೆ, ಅಭಿಷೇಕ, ಪಾರಾಯಣ, ಸಪ್ತಾಹಗಳೆಲ್ಲ ಒಂದೊಂದಾಗಿ ಕಣ್ಣಮುಂದೆ ಕಟ್ಟುತ್ತಿದ್ದವು. 'ಇಂಥ ಗುರುಗಳ ಮೂರ್ತಿಯನ್ನು ಸಮುದ್ರ ಪಾಲು ಮಾಡಬೇಕೆ? ಮಾಡಿ ತಾನಿದ್ದು ಸಾಧಿಸುವದೇನಿದೆ? ಮಕ್ಕಳ ಬಣ್ಣ ಬಯಲಾಗುತ್ತಿದೆ' ಎಂದುಕೊಳ್ಳುತ್ತ ಮೈ ಮೇಲೆ ಪರಿವೆ ಇಲ್ಲದಂತೆ ಮುಂದೆ ಸಾಗಿದರು. ಹಿಂದೆ ಕೈ ಹಿಡಿದೆಳೆದ ಆಕಾಶನತ್ತ ಗಮನವಿರಲಿಲ್ಲ. ಏರಿ ಬಂದ ತೆರೆ ಸೆಳೆದೇ ಬಿಟ್ಟಿತು. ಪೆಟ್ಟಿಗೆ ಜಾರಿ ತೇಲಿತು. "ಅಜ್ಜಾ" ಎಂಬ ಕೂಗು ಅಬ್ಬರದಲ್ಲಿ ಅಡಗಿತು. ಸುತ್ತೆಲ್ಲರೂ "ಹೋ" ಎಂದು ಕೂಗುತ್ತಿದ್ದಂತೆ, ದಡದಲ್ಲಿ ನಿಂತ ಮಕ್ಕಳಿಗೆ ಅರಿವಾಗುವಷ್ಟರಲ್ಲಿ ಅವರು ದತ್ತಪ್ಪನ ಪಾದ ಸೇರಿದ್ದರು.

ತೊಯ್ದ ಮೈಯೊಡನೆ ಕಂಬನಿಗಳನ್ನೂ ಇಳಿಸುತ್ತ ದತ್ತಪ್ಪನ ಪೆಟ್ಟಿಗೆಯೊಡನೆ ಬಂದ ಆಕಾಶ. "ಯಾಕೋ ಅದನ್ನ ತಿರಗಿ ತಂದಿ? ಅಜ್ಜಾ ಎಲ್ಲೆ?" ಎಂಬ ಸುನಿತಾಳ ಪ್ರಶ್ನೆಗೆ "ನೀವೆಲ್ಲಾ ಭಾಳ ಕೆಟ್ಟಿದ್ದೀರಿ. ಅಜ್ಜಾಗ ಪೂಜಾ ಮಾಡ್ಲಿಕ್ಕೆ ಬಿಡಲಿಲ್ಲ. ಅದಕ್ಕ ಅವರು ಸಮುದ್ರದಾಗ ಹೋಗಿಬಿಟ್ರು. ಅಜ್ಜಾನ ದತ್ತಪ್ಪನ್ನ ನಾ ಪೂಜಾ ಮಾಡ್ತೇನಿ" ಎಂದು ಪೆಟ್ಟಿಗೆಯನ್ನು ಗಟ್ಟಿಯಾಗಿ ಹಿಡಿದ. ದಿಗ್ಭ್ರಾಂತರಾದ ಮಕ್ಕಳು, "ಅಪ್ಪಾ" ಎಂದು ಕೂಗಿ ಓಡಿದರು. ಶ್ರೀಪಾದರ ಇಚ್ಛೆಯಂತೆ ದತ್ತಪ್ಪನ ವ್ಯವಸ್ಥೆಯಾಗಿತ್ತು. ಪರಂಪರಾನುಗತವಾಗಿ...

## ಮಧುರಾ ಕರ್ಣಮ್

ಲೇಖಕಿ ಮಧುರಾ ಬೆಳಗಾವಿಯವರು. ವಿದ್ಯಾಭ್ಯಾಸ – ಬಿ.ಎಸ್ಸಿ., ಎಲ್.ಎಲ್.ಬಿ. ವರೆಗೆ. ಕತೆ, ಹಾಸ್ಯಬರಹಗಳನ್ನು ಬರೆದಿದ್ದಾರೆ. 'ಮರಳಿ ಬಂದನಾ ವಸಂತ', 'ಋಣ', 'ಅವಳ ಭಾವಗಳ ಸುತ್ತ', 'ಗುಂಡಪುರಾಣ', 'ಜೀವಧಾರಾ... ನಿರಂತರಾ...' 'ಆಕ್ರಮಣ' ಅವರ ಕೆಲವು ಕೃತಿಗಳಾಗಿವೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.